## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ತಿಪಟೂರು

**ಸಿ.ಸಿ. ನಂಃ748/2017**

ಪ್ರಾ.ಸಾ ಃ 2

ಚಾ.ಸಾ ಃ 3

**ದಿಃ 01.02.2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| **ಸಾಕ್ಷೀದಾರರ ಹೆಸರು** | ಃ | **ಸುರೇಶ್** |
| **ತಂದೆಯ / ಗಂಡನ ಹೆಸರು** | ಃ | **ಮಲ್ಲಿಕಾರ್ಜುನಯ್ಯ** |
| **ವಯಸ್ಸು** | ಃ | **32 ವರ್ಷ** |
| **ಉದ್ಯೋಗ** | ಃ | **ವ್ಯವಸಾಯ** |
| **ವಾಸ ಸ್ಥಳ** | ಃ | **ಭೈರಾಗನಹಳ್ಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು,** |

**ಮುಖ್ಯ ವಿಚಾರಣೆಃ- ಸಸಅ ಯವರಿಂದಃ-**

ನನಗೆ ಚಾಸಾ-1 ಮತ್ತು 2 ರವರ ಪರಿಚಯ ಇದೆ. ದಿನಾಂಕಃ 20-03-2017 ರಂದು ಕಿಬ್ಬನಹಳ್ಳಿ ಪೊಲೀಸರು ಗೋಡಿಕೆರೆಗೆ ಹೋಗುವ ರಸ್ತೆಯ ಜೆಸಿ ಪುರದ ಕೆರೆಯ ಬಳಿಯಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ರಾಬರಿಗೆ ಸಂಬಂಧಿಸಿದಂತೆ ಪೊಲೀಸರು ಪಂಚನಾಮೆಯನ್ನು ಮಾಡಿದ್ದು ಆ ಸಂದರ್ಭದಲ್ಲಿ ನಾನು ಮತ್ತು ಚಾಸಾ-2 ರವರು ಇದ್ದೇವು. ಆ ಸಂದರ್ಭದಲ್ಲಿ ಚಾಸಾ-1 ಮತ್ತು 2 ರವರು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇವೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1 ಗಂಟೆಯ ಸಮಯದಲ್ಲಿ ಮಾಡಲಾಗಿದೆ ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ ಅದರಲ್ಲಿ ಸಾಕ್ಷಿಯ ಸಾಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ 1ನೇ ಆರೋಪಿತನ ಪರ ಶ್ರೀ ಎಂ.ಕೆ. ವಕೀಲರವರಿಂದ-</u>**

ನಾನು ಮತ್ತು ಚಾಸಾ-1 ಮತ್ತು 2 ಸ್ನೇಹಿತರು ಎಂದರೆ ಸರಿ. ಅದರಂತೆ ಚಾಸಾ-4 5 ಮತ್ತು 6 ರವರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಪಂಚನಾಮೆಗೆ ಸಹಿ ಮಾಡಲು ಪೊಲೀಸರು ನನಗೆ ಯಾವುದೇ ನೋಟಿಸು ನೀಡಿರಲಿಲ್ಲ. ಚಾಸಾ-1 ರವರು ರಾತ್ರಿ ರಾಬರಿ ನಡೆದಿರುವ ಬಗ್ಗೆ ನಮಗೆ ತಿಳಿಸಿದ್ದು, ಪಂಚನಾಮೆಗೆ ಬರುವಂತೆ ಕರೆದಿರುತ್ತಾರೆ. ಶೆಟ್ಟಿಕೆರೆ ಮತ್ತು ಕೆಬಿ ಕ್ರಾಸ್ ಪೊಲೀಸಠಾಣೆ ಸುಮಾರು 6 ಕಿ.ಮೀ ಹಂತರದಲ್ಲಿದೆ. ಪೊಲೀಸರು ಪಂಚನಾಮೆಗೆ ಬಂದದಿನ ಮಧ್ಯಾಹ್ನ 12 ಗಂಟೆಗೆ ಚಾಸಾ-1 ರವರು ನನ್ನನ್ನು ಕರೆದುಕೊಂಡು ಬಂದಿರುತ್ತಾರೆ. ಪಂಚನಾಮೆಯ ಕಾಲದಲ್ಲಿ ಒಟ್ಟು ನಾಲ್ಕು ಜನ ಪೊಲೀಸರು ಸ್ಥಳದಲ್ಲಿ ಇದ್ದರು. ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿತರು ಸಹ ಇದ್ದರು. ನಿಪಿ-2 ರಲ್ಲಿ ಏನು ಬರೆದುಕೊಂಡಿದ್ದಾರೆ ಎಂಬ ಮಾಹಿತಿ ಸಂಪೂರ್ಣವಾಗಿ ನನಗೆ ತಿಳಿದಿರುವುದಿಲ್ಲ. ಚಾಸಾ-1 ರವರ ಮೇಲಿನವರ ವಿಶ್ವಾಸಕ್ಕಾಗಿ ಪೊಲೀಸರು ಸಹಿ ಹಾಕು ಎಂದಿದ್ದರಿಂದ ಸಹಿ ಮಾಡಿರುತ್ತೇನೆ. ಆ ದಿನ ನಾವೆಲ್ಲರೂ ಕನ್ನದಲ್ಲಿಯೇ ಪಂಚನಾಮೆಗೆ ಸಹಿ ಮಾಡಿರುತ್ತೇವೆ. ನಿಪಿ-2ನ್ನು ಬರೆದ ಪೊಲೀಸ ಅಧಿಕಾರ ಹೆಸರು ನನಗೆ ತಿಳಿದಿರುವುದಿಲ್ಲ. ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ನಾನು ಸ್ಥಳಕ್ಕೆ ಹೋಗದೇ ಇದ್ದರು ಸಹ ಚಾಸಾ1 ರವರಿಗೆ ಸಹಾಯ ಮಾಡುವ ಉದ್ದೇಶದ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ2ನೇ ಆರೋಪಿತನ ಪರ ಶ್ರೀ ಎಂ.ಬಿ.ಕೆ. ವಕೀಲರವರಿಂದ-</u>**

ನಿಪಿ-2ಕ್ಕೆ ಆರೋಪಿತರ ಸಹಿ ತೆಗೆದುಕೊಂಡಿದ್ದರೋ ಇಲ್ಲವೋ ನನಗೆ ತಿಳಿದಿರುವುದಿಲ್ಲ ಆ ದಿನ ಆರೋಪಿತರು ಪಂಚನಾಮೆ ಮಾಡಿದ ಸ್ಥಚಿ.ಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 4ನೇ ಆರೋಪಿತನ ಪರ ಶ್ರೀ ಬಿ.ಎಸ್. ವಕೀಲರವರಿಂದ-**

ನಾನು ಒಟ್ಟು ಒಂದು ಸಹಿಯನ್ನು ಮಾಡಿರುತ್ತೇನೆ. ನಿಪಿ-2 ಎಷ್ಟು ಪುಟಗಳಿಂದ ಕೂಡಿದ ಮತ್ತು ಅದರಲ್ಲಿ ಏನು ಬರೆಯಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ಆರೋಪಿತರನ್ನು ಈ ಹಿಂದೆ ನಾನು ನೋಡಿರುವುದಿಲ್ಲ ಮತ್ತು ಈ ದಿನ ನ್ಯಾಯಾಲಯಕ್ಕೆ ಬಂದಾಗಲೇ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಕೆರೆಗೆ ಸಹ ಕರೆದುಕೊಂಡು ಬಂದಿದ್ದರು.

**1ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3ನೇ ಆರೋಪಿತನ ಪರ ವಕೀಲರು ಸಹ ಅಳವಡಿಸಿಕೊಳುವುದಾಗಿ ತಿಳಿಸಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷೀದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)**

**ಪ್ರಧಾನ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ., ತಿಪಟೂರು.**